ಶ್ರೀ ದತ್ತಾತ್ರೇಯ ನಾಟಕ ಕಂಪನಿಯ ನಟ ಶಾಂತಣ್ಣ ಪೂಜೆಗೆ ಹೂ ಕೀಳಕೆ ಬೆಳಕು ಹರಿಯೋಕೂ ಮೊದಲೇ ಮನೆ ಮನೆ ಕಾಂಪೋಂಡು ನೋಡ್ಕೋತಾ ಹೊರಟಿದ್ದ. ಅಲ್ಲೇ ಒಂದು ಕಾಂಪೋಂಡಿಗೆ ಒರಕ್ಕೊಂಡು ಜಯದೇವಾ ಬೀಡಿ ಸೇದ್ತಾ ನಿಂತಿದ್ದ ಸಾವು ಇವನನ್ನ ನೋಡಿ ನಕ್ಕ. ಒನ್ಸತಿ ತಲೆಯಾಡುಸ್ದ. ಬಾ ಅಂತ ಕರೆದಂಗಾಯ್ತು ಶಾಂತಣ್ಣಂಗೆ. ಹಿಂತಿರುಗಿ ಓಡಿದ ಶಾಂತಣ್ಣ ನಿಂತಿದ್ದು ಕಂಪನಿ ಕ್ಯಾಂಪ್ ಮನೆ ಸೇರಿದಾಗಲೇ.

ಇನ್ನೂ ಮಲಕ್ಕೊಂಡಿದ್ದ ಯಜಮಾನರ ಕಾಲು ಹಿಡಿದ. ಯಜಮಾನ್ರು "ಯಾಕೋ ಶಾಂತಾ" ಅಂದ್ರು. "ಇಲ್ಲೇ ಮುಂದಿನ ಕ್ರಾಸ್ನಗೆ ಸಾವು ನಿಂತಿದ್ದ. ನಂಗೆ ಬಾ ಅಂತಂದ. ಇವತ್ತೇ ಊರು ಬಿಡಬೇಕು. ಯಾವ್ದಾನಾ ಬಸ್ಸತ್ತಿ ರಾತ್ರಿಗೆಲ್ಲಾ ಜಮಖಂಡಿ ಸೇರ್ಕಂತೀನಿ. ರೊಕ್ಕ ಬೇಕು. ಐವತ್ತಾನಾ ಬೇಕು" ಅಂತಂದ. "ಸರಿ ತಗಾ" ಅಂತಂದ್ರು ಯಜಮಾನ್ರು. ಜೇಬಿಗೆ ರೊಕ್ಕ ತುಂಬ್ಕೊಂಡ ಶಾಂತಣ್ಣ ರಾತ್ರಿ ಜಮಖಂಡಿ ಸೇರ್ಕೊಂಡ.

ಜಮಖಂಡಿ ಸೇರಿದೋನೇ "ಬಾಗಿಲು ತಗೀರೀ, ಸಾವು ಬೆನ್ನತ್ತಿ ಬರಕ್ಕತನೆ, ಬೆಳಕರಿಯಾ ಮಟ ಉಳ್ಕಣಕೆ ಜಾಗ ಕೊಡ್ರೀ" ಅಂತ ಕೂಕ್ಕೋತಾ ಸಿಕ್ಕ ಸಿಕ್ಕ ಮನೆ ಬಾಗಿಲು ತಟ್ಟಿದ. ಸಾವಿನ ಸಾವಾಸ ಯಾಕೆ ಬೇಕು ಅಂತಂದು ಯಾರೂ ಅವ್ನಿಗೆ ಬಾಗಿಲೇ ತಗೀಲಿಲ್ಲ. ಬೆಳಕರಿಯಕೆ ಇನ್ನೊಂದು ಜಾಮ ಉಳಿದಿತ್ತು. ಎಲ್ಲಾ ಬಾಗಿಲು ತಟ್ಟೀ ತಟ್ಟೀ ಸುಸ್ತಾಗಿದ್ದ ಶಾಂತಣ್ಣ. ಶ್ರೀ ಅಂಬಾಭವಾನಿ ಕೃಪಾಪೋಷಿತ ನಾಟಕ ಮಂಡಳಿಯ ಯಜಮಾನರಾದ ಅಪ್ಪಾಜಪ್ನೋರ ಮನೆ ಬಾಗಿಲು ತಟ್ಟಿದ. ಬಾಗಿಲು ತೆಗೆದು ಶಾಂತಣ್ಣನ ಕತೆ ಕೇಳಿ ಅಪ್ಪಾಜಪ್ನೋರು, "ನೀನು ಈ ಊರಾಗಿದೀ ಅಂತ ಅವ್ನಿಗೆ ಗೊತ್ತಾಗಿರ್ತತೆ. ನಿನ್ನ ಬೆನ್ನತ್ತಿ ಬಂದಿರ್ತನೆ ಅವನು" ಅಂದ್ರು. "ಹಂಗರೆ ನಾನೇನು ಮಾಡ್ಲಿ" ಅಂತಂದ ಶಾಂತಣ್ಣ. "ಅವನು ಯಿವತ್ತು ರಾತ್ರೀನೇ ನಿನ್ನ ಹೊತ್ಗೊಂಡು ಹೋಗಬೇಕೂಂತೆನರ ಮಾಡಿದ್ರೆ ಹೆಂಗರ ಮಾಡಿ ಯಿವತ್ತು ರಾತ್ರಿ ತಡಾಯಿಸು. ಉಳ್ಕೊಂತೀ. ಹೆಂಗೂ ಬೆಳಕರಿಯಕೆ ಬಂತು. ಈಗೊನ್ಕೆಲಸ ಮಾಡು. ಬಾ ನಂಜತೆ" ಅಂತಂದು ಕಂಪನಿ ಥೇಟರ್‌ಗೆ ಕರ್ಕೊಂಡು ಹೋದ್ರು.

ಜಮಖಂಡಿ ಸೇರ್ತಿದ್ದಂಗೇ ಸಾವಿಗೆ ಶಾಂತಣ್ಣನ ವಾಸ್ನೆ ಸಿಕ್ಕಿಬಿಡ್ತು. ಆ ವಾಸನೆ ಹಿಡ್ಕೊಂಡು ಶಾಂತಣ್ಣ ಎಲ್ಲೆಲ್ಲಿ ಹೋಗಿದ್ನೋ ಅಲ್ಲೆಲ್ಲಾ ಹೋದ. ಇನ್ನೇನು ಬೆಳಕರಿಯಾ ಹೊತ್ತು. ಆಕಾಶ ಎಲ್ಲಾ ಬೂದು ಬೂದು ಬಣ್ಣ ಆಗಿತ್ತು. ಶಾಂತಣ್ಣನ್ನ ಕರ್ಕೊಂಡು ಹೋಗಲಿಲ್ಲಾ ಅಂದ್ರೆ ಲೆಕ್ಕ ತಪ್ತೆತೆ. ಮೂಗು ಅರಳುಸ್ಕೊಂಡು ಜಮಖಂಡಿ ಸುತ್ತುದ. ಕೊನೆಗೂ ಅಂಬಾಭವಾನಿ ಥೇಟರ್ ಹತ್ರ ಶಾಂತಣ್ಣನ ವಾಸನೆ ಸಿಗ್ತು. ವಾಸನೆ ಸಿಕ್ಕಿದತ್ರ ರಪ್ಪಂತ ಒಳಗೆ ಹೊಕ್ಕ.

ಒಳಗೆ ಒನ್ನಾಕು ತಡಿಕೇ ನಡೂಮಧ್ಯೆ ಬೆಳಕೋ ಬೆಳಕು. ಒಳಗೆ ಬರ್ತಿದ್ದಂಗೇ ಸಾವು ಗಾಬರಿಯಾದ. ಎದುರಿಗಿರನು ಒಬ್ನಲ್ಲ, ಇಬ್ಬ್ರಲ್ಲ, ಯಂಟತ್ತು ಶಾಂತಣ್ಣಂದ್ರು, ಇವನನ್ನೇ ನೋಡ್ತಿದ್ರು. ಇನ್ನೇನು ಸೂರ್ಯ ಹುಟ್ಟಬೇಕು. ಯಾರೂ ಅಂತ ನೋಡಕೆ ಟೈಮಿಲ್ಲ. ಕೈಗೆ ಸಿಕ್ಕ ಒಬ್ಬ ಶಾಂತಣ್ಣನ್ನ ಎಳ್ಕೊಂಡು ಸಾವು ಓಡಿದ.

ಅವತ್ತು ಮಧ್ಯಾಹ್ನ ಒಬ್ಬ ನಟ ಇನ್ನೊಬ್ನಿಗೆ ಹೇಳ್ತಾಯಿದ್ದ, "ಅದೇನು ಕಾಲ ಬಂತಪಾ. ಬೆಳಗಾಗತ್ಲೇನೇ ಯದ್ದು ಹ್ವರಗೆ ಬಂದ್ರೆ ಯಾವನೋ ಬೋಸುಡಿ ಮಗ ನಮದೊಂದು ದೊಡ್ಡ ಕನ್ನಡಿ ಕದ್ಕೊಂಡು ಓಡ್ತಾಯಿದ್ದ. ಕನ್ನಡೀ ಕದಿಯಂಥಾ ದರಿದ್ರ ಏನು ಬಂದಿತ್ತು ಅವ್ನಿಗೇ ಅಂತೀನಿ."

ಅದಕ್ಕೇ ಹಿರಿಯರು ಹೇಳಿದ್ದು, ಸಾವಾದ್ರೇನು, ಯಾರಾದ್ರೇನು, ನಾಟಕದೋರನ್ನ ತಡವಕೋಬೇಡಿ ಅಂತ.

❖